ಮೈಸೂರ ಗೆಜೆಟ್.

ನಂ. 44.] ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ. 18.

ಬೆಂಗಳೂರು, ಗುರುವಾರ, ಮೇ ತಾ॥ 6, ಸ್ಯ 1909.

ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೆ ಭಾಗ—ಮೈಸೂರು ಸೀಮೆಯ ಶ್ರೀಮಂ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೆ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ವ ಇನಾಂ ಸೂಪರ್ಡಿಟೆಂಡೆಂಟರು, ರೆವಿನ್ಯೂ ಕಮ್ಮಿಷನರವರು, ಕಲೆಕ್ಟೋಲರವರು, ಪಬ್ಲಿಕ್ ವರ್ಕಿನ ಆಫಿಸರಗಳು, ಫಾರಸ್ಟು, ರಜಿಸ್ಟ್ರೇರ್ಸ್, ವ ಎಡ್ಯುಕೇಷನ್ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜಿರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜಿರು, ಪೊಲೀಸ್ ಸೂಪರ್ಡಿಟೆಂಡೆಂಟರು ಫಾರಸ್ಟು ಆಫಿಸರಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟ್ಆಫೀಸ್ ನೋಟಿಸುಗಳು.

3ನೆ ಭಾಗ—ಲೆಜಿಸ್‌ಲೇಟಿವ್ ರೆಗ್ಯುಲೇಷನ್‌ಗಳು ಮತ್ತು ಅವುಗಳಿಂತ ಆದ ನಿಬಂಧನೆಗಳು.

4ನೆ ಭಾಗ—ಸರ್ಕಾರೀ ಕಾಗದ ಪತ್ರಗಳು.

1ನೆ ಭಾಗ.

ಮೈಸೂರು ಸೀಮೆಯ ಶ್ರೀಮಂ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 19ನೆ ಏಪ್ರಿಲ್ 1909.

ನಂ. 10305—ಸ್ಯಾನಿಟೆರಿ 76-08-48, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಪಡಿಸುವುದೇನೆಂದರೆ:—ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರ್ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

ಸ್ಥಳ.			ತಾಲ್ಲೂಕು.
ಕರಿಯನಕಟ್ಟೆ	...	...	ಚಾಮರಾಜನಗರ
ಕೆಸ್ತೂರು	...	...	ಡಿಟೋ
ಬಡಗಲಪುರ	...	...	ಡಿಟೋ
ಚಿಕ್ಕೊತ್ತನಹಳ್ಳಿ	...	...	ಕೃಷ್ಣರಾಜಪೇಟೆ
ದೊಡ್ಡಹೊಮ್ಮ	...	...	ನಂಜನಗೂಡು

ತಾರೀಖು 23ನೆ ಏಪ್ರೆಲ್ 1909.

ನಂ. 10460—ಸ್ಯಾನಿಟೆರಿ 14-08-26, ಸಮಸ್ತ ಜನರ ತಿಳಿವಳಿಕೆ ಬಗ್ಯೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಹಾಸನ ಡಿಸ್ಟ್ರಿಕ್ಟಿನಲ್ಲಿ ಪ್ಲೇಗು ತಗುಲಿದ ಪ್ರದೇಶಗಳೆಂದು ಆಗಿಂದಾಗ ಪ್ರಕಟಿಸಲ್ಪಟ್ಟಿದ್ದ ಈ ಕೆಳಗೆ ನಮೂದಿಸಿರುವ ಸ್ಥಳಗಳು ಎರಡು ತಿಂಗಳ ವರೆಗೆ ಜಾಡ್ಯ ರಹಿತವಾಗಿದ್ದುದರಿಂದ ಅಂಥಾ ಪ್ಲೇಗು ತಗುಲಿದ ಪ್ರದೇಶಗಳ ಪಟ್ಟಿಯಿಂದ ವಜಾ ಮಾಡಲ್ಪಟ್ಟಿವೆ.

ಸ್ಥಳ.				ತಾಲ್ಲೂಕು.
ಕಿತ್ತನಕೆರೆ	...	...	...	ಹಾಸನ
ಗ್ರಾಮ	...	...	...	ಡಿಟೋ
ಹೊಸಹಳ್ಳಿ	...	...	...	ಡಿಟೋ
ಸೀಗೆ	...	...	...	ಡಿಟೋ
ಪುರ	...	...	...	ಡಿಟೋ
ತಿಮ್ಮನಹಳ್ಳಿ	...	...	...	ಡಿಟೋ
ಕಾಲತಮ್ಮನಹಳ್ಳಿ	...	...	...	ಡಿಟೋ
ಉದ್ದೂರು	...	...	...	ಡಿಟೋ
ಸೋಮನಹಳ್ಳಿ	...	...	...	ಡಿಟೋ
ಹೊನ್ನೇನಹಳ್ಳಿ	...	...	...	ಡಿಟೋ
ಕೊಂಡಜ್ಜಿ	...	...	...	ಡಿಟೋ
ಮೇಲಗೋಡನಹಳ್ಳಿ	...	...	...	ಡಿಟೋ
ಮೈಲನಹಳ್ಳಿ	...	...	...	ಡಿಟೋ
ಬೇಲೂರು	...	...	...	ಬೇಲೂರು.
ಜವಗಲ್	...	...	...	ಅರಸೀಕೆರೆ
ಜಕ್ಕನಹಳ್ಳಿ	...	...	...	ಡಿಟೋ
ಅಗ್ಗಂಡ	...	...	...	ಡಿಟೋ
ಹೊಸಹಳ್ಳಿ	...	...	...	ಡಿಟೋ
ಕರಿಕೆರೆ	...	...	...	ಡಿಟೋ
ಚನ್ನರಾಯಪಟ್ಟಣ(ಹೊಲಗೆರೆ)	...	...	...	ಚನ್ನರಾಯಪಟ್ಟಣ
ಮಲ್ಲೇನಹಳ್ಳಿ	...	...	...	ಡಿಟೋ
ಜಲುವಗಾಲ	...	...	...	ಡಿಟೋ
ದೇವಸ್ಥಾನದ ಕಾಲೇನಹಳ್ಳಿ	...	...	...	ಡಿಟೋ
ನಂಬಿಹಳ್ಳಿ	...	...	...	ಡಿಟೋ

ತಾರೀಖು 26ನೆ ಏಪ್ರೆಲ್ 1909.

ನಂ. 10710—ಸ್ಯಾನಿಟೆರಿ 115—08—6, ಸಿಂಹಾಸ್ತ ಮಾಸಗಳಲ್ಲಿ ನಾಸಿಕಕ್ಕೆ ಹೋಗಬೇಕೆಂದಿರುವ ಯಾತ್ರಿಕರನ್ನು ಅಲ್ಲಿಗೆ ಹೋಗದಂತೆ ಅಡ್ಡಿಪಡಿಸುವುದು ಅವಶ್ಯಕವಿಲ್ಲವೆಂಬ ವಿಷಯದಲ್ಲಿ ಕೆಲವು ಕಾಗದಪತ್ರಗಳನ್ನು 9—3—1909ನೆ ಮುಕ್ಕಂ 8738—ಸ್ಯಾನಿಟೆರಿ 115—08—4ನೆ ನಂಬರ್ ಇಸ್ತಿಹಾರ್ನಾಮೆಯ ಮೂಲಕ ಪ್ರಕಟಿಸೋಣವಾಯಿತಷ್ಟೆ. ಆದನ್ನು ರದ್ದುಮಾಡಿ ಬೊಂಬಾಯಿ ಸರ್ಕಾರದ ಸೆಕ್ರಿಟೆರಿಯವರಿಂದ ಮೈಸೂರು ಸೀಮೆಯ ಬ್ರಿಟಿಷ್ ರೆಸಿಡೆಂಟರವರಿಗೆ ಬಂದು ಅಸಿಸ್ಟೆಂಟ್ ರೆಸಿಡೆಂಟರವರ 15—4—09ನೆ ಮುಕ್ಕಂ2236ನೆ ನಂಬರ್ ಇಂಡಾರ್ಸ್‌ಮೆಂಟಿನ ಅವುರಹಾ ಇಲ್ಲಿಗೆ ತಲಪಿದ ಇದರಡಿ ಕಂಡ 6—4—09ನೆ ಮುಕ್ಕಂ 1804ನೆ ನಂಬರ್ ಲೆಟರನ್ನು ಸಮಸ್ತರ ತಿಳಿವಳಿಕೆಯ ಬಗ್ಯೆ ಇದರಡಿ ಪ್ರಕಟಿಸಿದೆ :—

ಬೊಂಬಾಯಿ ಗವರ್ನ್‌ಮೆಂಟ್ ಸೆಕ್ರಿಟೆರಿಯವರಿಂದ ಮೈಸೂರು ಸೀಮೆಯ ಬ್ರಿಟಿಷ್ ರೆಸಿಡೆಂಟರವರಿಗೆ ಬಂದ 1909ನೆ ಏಪ್ರೆಲ್ 6ನೆ ಮುಕ್ಕಂ 1804ನೆ ನಂಬರ್ ಲೆಟರು ;

"ಕಳೆದ ಫೆಬ್ರವರಿ 17ರಲ್ಲಿ ತಮಗೆ ಖರೆಸೋಣವಾಗಿದ್ದ 880ನೆ ನಂಬರ್ ಲೆಟರಿನ ವಿಷಯದಲ್ಲಿ ಶ್ರುತಪಡಿಸಿಕೊಳ್ಳುವುದೇನೆಂದರೆ,—ನಾಸಿಕದಲ್ಲಿ ವಾಂತಿಭೇದಿಯು ಪುನಃ ಪ್ರಾಪ್ತವಾಗಿರುವ ಪ್ರಯುಕ್ತ ಸಿಂಹಾಸ್ತನ ಉಳಿದಿರುವ ತಿಂಗಳುಗಳಲ್ಲಿ ಸದರಿ ಯಾತ್ರಾಸ್ಥಳಕ್ಕೆ ಹೋಗಬೇಕೆಂದಿರುವ ಯಾತ್ರಿಕರನ್ನು ಅಲ್ಲಿಗೆ ಹೋಗದಂತೆ ಅಡ್ಡಿಪಡಿಸುವುದಕ್ಕೆ ತಕ್ಕ ಏರ್ಪಾಡುಗಳನ್ನು ನಡೆಸಬೇಕು."

ತಾರೀಖು 28ನೆ ಏಪ್ರೆಲ್ 1909.

ನಂ. 10697—ಲೋ. ಬೋ. 353-07-9, ತಿರುಮಕೂಡ್ಲು ನರಸೀಪುರ ತಾಲ್ಲೂಕಿನಲ್ಲಿರುವ ಸೋಸಲೆಯಲ್ಲಿ ಒಂದು ಮುಸಾಫರ್‌ಖಾನೆಯನ್ನು ಕಟ್ಟುವ ಬಗ್ಯೆ ಕೆಲವು ಜಮೀನುಗಳು ಬೇಕಾಗಿವೆಯೆಂದು 1906ನೆ ಇಸವಿಯ ನವಂಬರು 12ನೆ ತಾರೀಖಿನ 3858—ಲೋ. ಬೋ. 158-06-4ನೆ ನಂಬರ್ ಇಸ್ತಿಹಾರ್ನಾಮೆಯಲ್ಲಿ ಪ್ರಕಟಿಸಿದ್ದ ಪ್ರಕಟನೆಯನ್ನು ಈ ಮೂಲಕ ರದ್ದುಮಾಡಿ ಇದೆ.

ತಾರೀಖು 28ನೆ ಏಪ್ರೆಲ್ 1909.

ನಂ. 10705—ಮೆಡಿಕಲ್ 224-08-2, ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯ ರೆಸಿಡೆಂಟ್ ಮೆಡಿಕಲ್ ಆಫಿಸರಾಗಿರುವ ಅಸಿಸ್ಟೆಂಟ್ ಸರ್ಜನ್ ಮಿ॥ ಸಿ. ಎ. ನಂಜಪ್ಪನವರಿಗೆ ಮೈಸೂರು ಸರ್ವಿಸ್ ರೆಗ್ಯುಲೇಷನುಗಳ 177ನೆ ಪ್ರಕರಣದ ಮೇರೆಗೆ 1909ನೆ ಇಸವಿ ಮೇ ಗುರ್ರೇ ತಾರೀಖಿನ ಲಾಗಾಯಿತು ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಪೋಸ್ಟ್ ಗ್ರಾಜ್ಯುಯೇಟ್ ಕೋರ್ಸ್ ಎಂದರೆ ಗ್ರಾಜ್ಯುಯೇಟಾದ ತರುವಾಯ ಹೊಂದಬೇಕಾದ ಶಿಕ್ಷಣವನ್ನು. ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಜೂದುತ್ತಿರುವ ಅಸಿಸ್ಟೆಂಟ್ ಸರ್ಜ್ ಮಿ॥ ಎಂ. ಜಗನ್ನಾಥಂ ಪಿಳ್ಳೈಯವರು ಮಿ॥ ಸಿ. ಎ. ನಂಜಪ್ಪನವರು ರಜಾವಿನ ಮೇಲೆ ಇರುವಾಗ ಅಥವಾ ಮತ್ತೊಂದು ಹುಕುಂ ಕೊಡುವ ತನಕ ಅವರಿಗಾಗಿ ಬದಲಿ ಕೆಲಸ ನೋಡತಕ್ಕದ್ದು.

ತಾರೀಖು 27ನೆ ಏಪ್ರೆಲ್ 1909.

ನಂ. 10673—ಮ್ಯು. 559-07-2೮, ಸ|| 1906ನೆ ಇಸವಿ 7ನೆ ನಂಬರ್ ಮ್ಯುನಿಸಿಪಲ್ ರೆಗ್ಯುಲೇಷನಿನ 7ನೆ ಪ್ರಕರಣದ ಮೇರೆಗೆ ರಾಮಸಮುದ್ರ ಗ್ರಾಮ ಸಹಿತ ಚಾಮರಾಜನಗರ ಟವನನ್ನು ಫಲಾನಾ ಸರಹದ್ದುಗಳುಳ್ಳ ಮ್ಯುನಿಸಿಪಾಲಿಟಿ ಯಾಗಿ ಏರ್ಪಡಿಸಬೇಕೆಂದು ಉದ್ದೇಶಿಸಿ ಇದೆ ಎಂಬುದಾಗಿ ಸದರಿ ರೆಗ್ಯುಲೇಷನಿನ ೭ನೆ ಪ್ರಕರಣದ ಮೇರೆಗೆ 1908ನೆ ಇಸವಿ ನವಂಬರ್ 27ನೆ ತಾರೀಖಿನ ಇಸ್ತಿಹಾರ್ನಾಮೆಯ ಮೂಲಕ 1908ನೆ ಇಸವಿಯ ಗೆಜೆಟ್ಟಿನ 11ನೆ ಭಾಗದಲ್ಲಿ ಇಂಗ್ಲಿಷ್ ಗೆಜೆಟ್ಟಿನ 72ನೆ ಪುಟದಲ್ಲಿಯೂ, ಕನ್ನಡ ಗೆಜೆಟ್ಟಿನ 17—18ನೆ ಪುಟದಲ್ಲಿಯೂ, 1909ನೆ ಇಸವಿ ಜನವರಿ 14ನೆ ತಾರೀಖಿನಲ್ಲಿ ಘಾಯಿ ಷ್ಮಾಡಿರುವುದಲ್ಲದೆ ಸದರಿ ಚಾಮರಾಜನಗರ ಟವನಿನ ಬಹಿರಂಗವಾದ ಸ್ಥಳಗಳಲ್ಲಿಯೂ ಚಿಕಟುಯಿಸಿದುದರಿಂದಲೂ, ಸದರಿ ಉದ್ದೇಶಕ್ಕೆ ಯಾವ ಆಕ್ಷೇಪಣೆಯೂ ಬಂದಿರುವುದಿಲ್ಲವಾದುದರಿಂದಲೂ, ಮೈಸೂರು ಶ್ರೀಮದ್ ಮಹಾರಾಜಾ ಸಾಹೇಬ್ಬಹದ್ದೂರ್ರವರು ಸದರಿ ರೆಗ್ಯುಲೇಷನಿನ 4 (1)ನೆ ಪ್ರಕರಣದಿಂದ ಕೊಡಲ್ಪಟ್ಟ ಅಧಿಕಾರಗಳನ್ನು ಚಲಾಯಿಸುವುದರಲ್ಲಿ ಸದರಿ ಚಾಮರಾಜ ನಗರ ಟವನನ್ನು ಮ್ಯುನಿಸಿಪಾಲಿಟಿಯಾಗಿ ಏರ್ಪಡಿಸಿ ಸದರಿ ಮ್ಯುನಿಸಿಪಾಲಿಟಿಯ ಸರಹದ್ದು 1909ನೆ ಜುಲೈ 1ನೆ ತಾರೀಖಿನ ದಿನವೂ ಆ ಅನಂತರವೂ ಮುಂದೆ ಸಮೂದಿಸಿರುವ ಪ್ರಕಾರ ಇರಬೇಕೆಂದು ಅಪ್ಪಣೆ ದಯಪಾಲಿಸಿರುತ್ತಾರೆ.

ಚಾಮರಾಜನಗರದ ಮ್ಯುನಿಸಿಪಲ್ ಟೌನಿಗೆ ರಾಮಸಮುದ್ರ ಗ್ರಾಮವನ್ನು ಸೇರಿಸಿ ಚಾಮರಾಜನಗರದ ಮ್ಯುನಿಸಿಪಾಲಿಟಿ ಯ ಚತುರ್ಸರ್ಹಗಳನ್ನು ಸಮಸ್ತರಿಗೂ ತಿಳಿಯಪಡಿಸಲು ಈ ಕೆಳಗೆ ವಿವರಿಸಿ ಇರುತ್ತದೆ.

ಸದರೀ ಮ್ಯುನಿಸಿಪಾಲಿಟಿಯ ಸರಹದ್ದು ಚಾಮರಾಜನಗರಕ್ಕೆ ವಾಯುವ್ಯ ದಿಕ್ಕಿನಲ್ಲಿರುವ ನಂಜನಗೂಡು,—ಹಾಸನೂರು ಘಾಟಿ ರಸ್ತೆಯ ಎಡಪಕ್ಕದಲ್ಲಿ ಸರ್ವೆ 23ನೆ ನಂಬರಿನ ಆಗ್ನೇಯ ಮೂಲೆಯಬಳಿ ಪ್ರಾರಂಭವಾಗಿ 24—21—3 ಮತ್ತು 1ನೆ ನಂಬರುಗಳ ದಕ್ಷಿಣ ದಿಕ್ಕಿನ ಬೇಲಿ ಹೊರಗಡೆ ಸರ್ವೆ 1ನೆ ನಂಬರಿನ ಜವಿನು ಆಗ್ನೇಯ ಮೂಲೆವರೆಗೆ ಬಂದು ಉತ್ತರಕ್ಕೆ ತಿರುಮಕೂಡ್ಲು ನರಸೀಪುರದ ರಸ್ತೆಕಡೆಗೆ ತಿರುಗಿ ಸರ್ವೆ 1—5—6—7 ಮತ್ತು 13ನೆ ನಂಬರುಗಳ ಪೂರ್ವ ದಿಕ್ಕಿನ ಸರಹದ್ದು ಹೊರಗೆ ಸದರಿ 13ನೆ ನಂಬರು ಜವಿನಿನ ಉತ್ತರ ಭಾಗದಲ್ಲಿರುವ ಹಳ್ಳದವರೆಗೆ ಹೋಗಿ ಸದರೀ ರಸ್ತೆಯನ್ನು ದಾಟಿ ಅನಂತರ ಸರ್ವೆ 342 ಮತ್ತು 343ನೆ ನಂಬರುಗಳ ಪಶ್ಚಿಮ ಭಾಗದ ಬೇಲಿ ಹೊರಗೆ ಸ್ವಲ್ಪದೂರ ಬಂದು ಪೂರ್ವಕ್ಕೆ ತಿರುಗಿ 343—34೩ನೆ ನಂಬರು ಪೈಕಿ ಖಣಿಗೆ ದಕ್ಷಿಣವಾಗಿರುವ ಭಾಗವನ್ನೂ ಮತ್ತು 354ನೆ ನಂಬರು ಪೈಕಿ ಖಣಿಗೆ ದಕ್ಷಿಣವಾಗಿಯೂ ಪಶ್ಚಿಮವಾಗಿಯೂ ಇರುವ ಭಾಗವನ್ನೂ ಒಳಗೊಂಡು ದಕ್ಷಿಣಕ್ಕೆ ತಿರುಗಿ 356—360—361 ಮತ್ತು 359ನೆ ನಂಬರು ಪೂರ್ತಾ ಜವಿನುಗಳನ್ನು ಒಳಗೊಂಡು ರಾಮಸಮುದ್ರದ ರಸ್ತೆಗೆ ಸೇರುತ್ತದೆ. ಅಲ್ಲಿಂದ ಪೂರ್ವಕ್ಕೆ ರಾಮಸಮುದ್ರದ ರಸ್ತೆಗೆ ಉತ್ತರ ಭಾಗದಲ್ಲಿರುವ ಚಾಮರಾಜನಗರದ ಗ್ರಾಮದ ಸರ್ವೆ 358—412—298—296—295 ಮತ್ತು ರಾಮಸಮುದ್ರ ಗ್ರಾಮದ ಸರ್ವೆ 613 ಈ ನಂಬರು ಜವಿನುಗಳ ದಕ್ಷಿಣ ದಿಕ್ಕಿನ ಬೇಲಿ ಹೊರಗಿನಿಂದ ಬಂದು ಸರ್ವೆ 612—618—619—620—629—623 ಈ ನಂಬರುಗಳನ್ನು ಮತ್ತು 623—624ನೆ ನಂಬರುಗಳ ಮಧ್ಯೆ ಇರುವ ಖಣಿಯನ್ನು ಸರ್ವೆ 624—625ನೆ ನಂಬರುಗಳನ್ನು ಒಳಗೊಂಡು 626ನೆ ನಂಬರಿನ ಪೂರ್ವ ದಿಕ್ಕಿನ ಬೇಲಿ ಹೊರಗೆ ಉತ್ತರಕ್ಕೆ ತಿರುಗಿ 652ನೆ ನಂಬರಿನ ದಕ್ಷಿಣ ಭಾಗದ ಬೇಲಿಯನ್ನು ಅನುಸರಿಸಿ 661ನೆ ನಂಬರಿನ ಪಶ್ಚಿಮ ದಿಕ್ಕಿನ ಬೇಲಿ ಹೊರಗೆ ಸ್ವಲ್ಪ ದೂರವೂ ದಕ್ಷಿಣ ದಿಕ್ಕಿನ ಬೇಲಿಯಲ್ಲಿ ಪೂರ್ತಾ ನಂಬರು 662ನೆ ನಂಬರು ಒಳಗೊಂಡು ದಕ್ಷಿಣೋತ್ತರವಾಗಿ ಇರುವ ಖಣಿಗೆ ಅಡ್ಡಲಾಗಿ ಬಂದು ಸರ್ವೆ 1ನೆ ನಂಬರಿನ ಪಶ್ಚಿಮ ಮತ್ತು ದಕ್ಷಿಣ ಭಾಗದ ಬೇಲಿ ಹೊರಗಿನಿಂದ ಹೊರಟು ಹಳ್ಳವನ್ನು ದಾಟಿ ದಕ್ಷಿಣಕ್ಕೆ ತಿರುಗಿ ಸರ್ವೆ 112 ಮತ್ತು 114ನೆ ನಂಬರು ಜವಿನುಗಳ ಪಶ್ಚಿಮ ದಿಕ್ಕಿನ ಸರಹದ್ದಿನಲ್ಲಿ ಬಂದು 116 ಮತ್ತು 118ನೆ ನಂಬರು ಜವಿನುಗಳನ್ನು ಸುತ್ತಿಕೊಂಡು 118ನೆ ನಂಬರಿನ ನೈರುತ್ಯದ ಮೂಲೆಯಲ್ಲಿ ಖಣಿಯನ್ನು ದಾಟಿ ಪಶ್ಚಿಮಕ್ಕೆ ತಿರುಗಿ 563—564—565—583—584—585ನೆ ನಂಬರುಗಳ ಉತ್ತರ ಭಾಗದ ಬೇಲಿ ಹೊರಗೆ ಬಂದು ಆಬಳಿ ಇರುವ ಖಣಿಗೆ ಅಡ್ಡಲಾಗಿ ಸರ್ವೆ 609 ಮತ್ತು 611ನೆ ನಂಬರುಗಳ ಪೂರ್ವ ದಿಕ್ಕಿನ ಸರಹದ್ದು ಹೊರಗೆ ಹೋಗಿ ಚಾಮರಾಜನಗರ, ರಾಮಸಮುದ್ರದ ರಸ್ತೆಗೆ ಸೇರುತ್ತದೆ. ಅಲ್ಲಿಂದ ಪಶ್ಚಿಮಕ್ಕೆ ತಿರುಗಿ 611—609—601—600 ಮತ್ತು ಚಾಮರಾಜನಗರದ ಸರ್ವೆ 391—390—388—387—386—385—366ನೆ ನಂಬರುಗಳ ಉತ್ತರ ದಿಕ್ಕಿನ ಸರಹದ್ದು ಹೊರಗೆ ಬಂದು ದಕ್ಷಿಣಕ್ಕೆ ತಿರುಗಿ 366—367ನೆ ನಂಬರುಗಳ ಪಶ್ಚಿಮ ದಿಕ್ಕಿನ ಬೇಲಿ ಮಾರ್ಗವಾಗಿಯೂ ಮತ್ತು 36೩ನೆ ನಂಬರಿನ ಪೂರ್ವ ಮತ್ತು ಉತ್ತರ 429ನೆ ನಂಬರಿನ ಉತ್ತರ ಮತ್ತು ಪಶ್ಚಿಮ ಬೇಲಿ ಮಾರ್ಗವಾಗಿ ಬಂದು ಖಣಿಯನ್ನು ದಾಟಿ 427ನೆ ನಂಬರಿನ ಉತ್ತರ, ಪಶ್ಚಿಮ ಮತ್ತು 433—434ನೆ ನಂಬರಿನ ಪಶ್ಚಿಮದ ಬೇಲಿ ಮಾರ್ಗವಾಗಿ ಹಾಸನೂರು ಘಾಟಿ ರಸ್ತೆಗೆ ಸೇರುತ್ತದೆ. ಅನಂತರ ಸರ್ವೆ 434—436ನೆ ನಂಬರುಗಳ ರಸ್ತೆ ಪಕ್ಕದ ಬೇಲಿ ಮಾರ್ಗವಾಗಿ ಮತ್ತು ಸರ್ವೆ 444ನೆ ನಂಬರಿನ ಸದರೀ ಬೇಲಿಯಲ್ಲಿ ಸ್ವಲ್ಪ ದೂರಕ್ಕೆ ಹೋಗಿ ಹಾಸನೂರು ಘಾಟಿ ರಸ್ತೆಯನ್ನು ದಾಟಿ 458—459 ಮತ್ತು 461ನೆ ನಂಬರುಗಳ ಉತ್ತರದಿಕ್ಕಿನ ಎಲ್ಲೆ ಹೊರಗಡೆ ಬಂದು 462—463—464 ಮತ್ತು 467ನೆ ನಂಬರುಗಳನ್ನು ಒಳಗೊಂಡು ಗುಂಡ್ಲುಪೇಟೆ ರಸ್ತೆಗೆ ಸೇರುತ್ತದೆ. ಮುಂಚಕ್ಕೆ ಸರ್ವೆ 470ನೆ ನಂಬರಿನ ಪಶ್ಚಿಮ ಸರಹದ್ದು ಹೊರಗೆ ನೈರುತ್ಯ ಮೂಲೆವರೆಗೆ ಬಂದು ಸದರೀ ರಸ್ತೆಯನ್ನು ದಾಟಿ 471—472—466ನೆ ನಂಬರುಗಳ ಪೂರ್ವ ದಿಕ್ಕಿನ ಬೇಲಿ ಹೊರಗೊಂಡು ಪಶ್ಚಿಮಕ್ಕೆ ತಿರುಗಿ 466—473ನೆ ನಂಬರುಗಳ ಉತ್ತರ ದಿಕ್ಕಿನ ಬೇಲಿ ಮಾರ್ಗವಾಗಿಯೂ 475ನೆ ನಂಬರು ಕೆರೆ ಏರಿಯ ಆಗ್ನೇಯ ಮೂಲೆಗೆ ಸೇರಿ ಸದರಿ ಕೆರೆ ಪೂರ್ವದಿಕ್ಕಿನ ಏರಿಯನ್ನು ಒಳಗೊಂಡು ಸರ್ವೆ 672ನೆ ನಂಬರಿನ ದಕ್ಷಿಣ ಮತ್ತು 672—673ನೆ ನಂಬರುಗಳ ಪೂರ್ವಭಾಗದ ಸರಹದ್ದು ಹೊರಗಡೆಯಿಂದ ಸರ್ವೆ 701—702—703—704—679—705 ಮತ್ತು 706ನೆ ನಂಬರುಗಳನ್ನು ಒಳಗೊಂಡು 688 ಮತ್ತು 689ನೆ ನಂಬರುಗಳ ದಕ್ಷಿಣ ಭಾಗದ ಬೇಲಿಯ ಹೊರಗೂ ಮತ್ತು 689—686ನೆ ನಂಬರುಗಳ ಪೂರ್ವಭಾಗದ ಸರಹದ್ದು ಹೊರಗೆ ಬಂದು 686ನೆ ನಂಬರಿನ ಈಶಾನ್ಯ ಮೂಲೆಯಲ್ಲಿ ನಂಜನಗೂಡು, ಹಾಸನೂರು ಘಾಟಿ ರಸ್ತೆಗೆ ಸೇರಿ ಸರ್ವೆ 686—685 ಮತ್ತು 659ನೆ ನಂಬರುಗಳ ಉತ್ತರ ಭಾಗದ ಎಲ್ಲೆ ಹೊರಗಡೆ ಹೋಗಿ ಸದರೀ ರಸ್ತೆಯನ್ನು ದಾಟಿ ಮೊದಲು ಪ್ರಾರಂಭಿಸಿದ ಸ್ಥಳಕ್ಕೆ ಎಂದರೆ 23ನೆ ನಂಬರಿನ ಆಗ್ನೇಯ ಮೂಲೆ ಬಳಿಗೆ ಸೇರುತ್ತದೆ.

ತಾರೀಖು 28ನೆ ಏಪ್ರೆಲ್ 1909.

ನಂ. 10718—ಮ್ಯು. 436-08-4, ಮೈಸೂರು ಗೆಜೆಟ್ಟಿನಲ್ಲಿ ಈಚಿಗೆ ಪ್ರಕಟಿಸಿದ 1909ನೆ ಇಸವಿಯ ಮ್ಯುನಿಸಿಪಲ್ ಚುನಾವಣೆಯ ನಿಬಂಧನೆಗಳ ಪ್ರಕಾರ, ಮ್ಯುನಿಸಿಪಲ್ ಕೌನ್ಸಿಲರುಗಳ ಚುನಾವಣೆಯ ಬಗ್ಯೆ ವೋಟರ್ಸ್ ಯಾ ಸಮ್ಮತಿಕೊಡುವವರ ಪಟ್ಟಿಯನ್ನೂ ಮ್ಯುನಿಸಿಪಲ್ ಕೌನ್ಸಿಲರುಗಳಾಗಿ ನೇಮಿಸಲ್ಪಡಲು ಉಮೇದುವಾರರಾದವರ ಪಟ್ಟಿಯನ್ನೂ ಇನ್ನೂ ತಯಾರ್ಮಾಡಿಲ್ಲವಾದ ಕಾರಣ, ಬೆಂಗಳೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲಿನಲ್ಲಿ ಮೆಂಬರಾಗಿರುವ ಮಿ|| ದೊರಸಾಮಿ ಐಯ್ಯರು ಶಿವಾಯಿ ಬಾಕಿ ಮೆಂಬರುಗಳ ಸಭಿಕತನದ ಅವಧಿಯನ್ನು 1909ನೆ ಆಗಸ್ಟ್ ಆಖೈರುವರೆಗೆ ಬಡಾಯಿಸಿ ಇದೆ. ಮಿ|| ದೊರೆಸಾಮಿ ಐಯ್ಯರ ಸಭಿಕತನದ ಅವಧಿಯು 1909ನೆ ಅಕ್ಟೋಬರ್ 25ನೆ ತಾರೀಖಿನವರೆಗೆ ಇರುತ್ತದೆ.

ತಾರೀಖು 30ನೆ ಏಪ್ರೆಲ್ 1909.

ನಂ. 10782—ಲೋ. ಬೋ. 362-08-2, ಲೋಕಲ್ ಬೋರ್ಡ್ಸ್ ರೆಗ್ಯುಲೇಷನಿನ ಮೇರೆಗೆ ವಿಧಿನೋಣವಾದ ನಿಬಂಧನೆಗಳ ಪೈಕಿ 8ನೆ ಪ್ಯಾರಾವಿನ (e) ಕಲಮಿಗನುಸಾರವಾಗಿ ಮೊಕರರ್ಮಾಡಲ್ಪಟ್ಟು ರಾಜೀನಾಮೆಯನ್ನು ಕೊಟ್ಟಿರುವ ರೆವರೆಂಡ ಡಬ್ಲ್ಯು. ಇ. ಟಾಮ್ಲಿನ್ಸರವರ ಸ್ಥಾನದಲ್ಲಿ ರೆವರೆಂಡ ಎ. ಬ್ಯಾಕ್ ಬ್ಯಾಂಕ್ ಯವರನ್ನು ಶಿವಮೊಗ್ಗ ಡಿಸ್ಟ್ರಿಕ್ಟು ಬೋರ್ಡಿನ ಮೆಂಬರಾಗಿ ಮೊಕರರ್ ಮಾಡಲಾಗಿದೆ.

ತಾರೀಖು 3ನೆ ಮೇ 1909.

ನಂ. 10863—ಎಲ್. ಬಿ. 64-08-4, ಮೂಡಿಗೆರೆ ತಾಲ್ಲೂಕು ಬೋರ್ಡು ಸಭಿಕತನಕ್ಕೆ ರಾಜೀನಾಮೆಯನ್ನು ಕೊಟ್ಟ ಮಿ|| ಸಿದ್ದೇಗೌಡರಿಗೆ ಬದಲಾಗಿ ಮಿ|| ಕುದುರೆಗುಂಡಿ ತಿಮ್ಮಕೆಟ್ಟರನ್ನು ಲೋಕಲ್ ಬೋರ್ಡು ರೆಗ್ಯುಲೇಷನಿನ ಮೇರೆಗೆ ಏರ್ಪಟ್ಟ ನಿಬಂಧನೆಗಳ 7 (ಎಚ್) ಪ್ಯಾರಾವಿನ ಪ್ರಕಾರ ಸದರಿ ಬೋರ್ಡಿಗೆ ಮೆಂಬರನ್ನಾಗಿ ಮೊಕರರ್ಮಾಡಿ ಇದೆ.

ತಾರೀಖು 3ನೆ ಮೇ 1909.

ನಂ. 10871—ಮ್ಯು. 214-07-20, ಹರಿಹರದ ಮ್ಯುನಿಸಿಪಾಲಿಟಿಯೊಳಗೆ ಅಗಸರ ಕೇರಿಯಲ್ಲಿ ರಸ್ತೆಗಳನ್ನು ಹಾಕುವ ಬಗ್ಯೆ ಸರ್ಕಾರಕ್ಕೆ ಜಮೀನು ತೆಗೆದುಕೊಳ್ಳುವ ವಿಚಾರದಲ್ಲಿ 1908ನೆ ಡಿಸೆಂಬರ್ 1ನೆ ನಂಬರು 5192—ಮ್ಯು. 214-07-17ನೆ ನಂಬರ್ ಇಸ್ತಿಹಾರ್ನಾಮೆಯನ್ನು, 1894ನೆ ಇಸವಿ 7ನೆ ನಂಬರ್ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನಿನ 48 (1) ನೆ ಪ್ರಕರಣ ಪ್ರಕಾರ ಈ ಮೂಲಕ ರದ್ದುಮಾಡಿ ಇದೆ.

ತಾರೀಖು 4ನೆ ಮೇ 1909.

ನಂ. ಜು. 3393—ಕೋರ್ಟ್ಸ್ 95-08-6, ಸರ್ಕಾರ ಕೆಲಸದ ಅನುಕೂಲಕ್ಕೋಸ್ಕರ ಇದರಡಿ ಕಂಡ ಮುನಸಿಫರ ಗಳ ವರ್ಗಾವರ್ಗಿಗಳನ್ನು ಮಂಜೂರ್ಮಾಡಿ ಇರುತ್ತದೆ. ಈ ವರ್ಗಾವರ್ಗಿಗಳು ಕೋರ್ಟುಗಳ ರಜಾ ಪೂರೈಸಿದ ತಾರೀಖು ಲಾಗಾಯಿತು ಅಂದರೆ 1909ನೆ ಇಸವಿ ಮೇ 27ನೆ ತಾರೀಖು ಲಾಗಾಯಿತು ಜಾರಿಗೆ ಬರತಕ್ಕದ್ದು:—

		ಎಲ್ಲಿಂದ.	ಎಲ್ಲಿಗೆ.
1.	ಮಿ|| ಎಂ. ನರಸಪ್ಪಯ್ಯನವರು	ಹೊಳೇನರಸೀಪುರದಿಂದ	ಶಿವಮೊಗ್ಗಕ್ಕೆ.
2.	,, ಪಿ. ಮಹದೇವಯ್ಯನವರು	ಸಾಗರದಿಂದ	ಹೊಳೇನರಸೀಪುರಕ್ಕೆ.
3.	,, ಕೆ. ಎಸ್. ನಾರಾಯಣ ಅಯ್ಯಂಗಾರ್ರವರು	ಶಿವಮೊಗ್ಗದಿಂದ	ಸಾಗರಕ್ಕೆ.

ತಾರೀಖು 4ನೆ ಮೇ 1909.

ನಂ. ಜು. 3408—ಕೋರ್ಟ್ಸ್ 320-08-10, ಬೆಂಗಳೂರಿನ ಸಬ್ ಜಡ್ಜ್ ಮತ್ತು ಮೊದಲನೆ ತರಗತಿಯ ಮಾಜಿಸ್ಟ್ರೇಟರಾದ ಮಿ|| ಟಿ. ಇ. ಜಯರಾಮು ಅಯ್ಯರ್, ಬಿ, ಎ., ಬಿ. ಎಲ್. ರವರು ಸಾಕ್ಷಿಗಳ ಹೇಳಿಕೆಯನ್ನು ಸ್ವಹಸ್ತಾಕ್ಷರದಲ್ಲಿ ಇಂಗ್ಲಿಷ್ ಭಾಷೆಯಲ್ಲಿ ಬರೆದುಕೊಳ್ಳತಕ್ಕದ್ದೆಂತ 1904ನೆ ಇಸವಿಯ ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನ 357ನೆ ಪ್ರಕರಣದ ಮೇರೆಗೆ ಹುಕುಂ ಮಾಡೋಣಾಯಿದೆ.

ಹುಕುಂ ಬಮೋಜೀಬ್,
ಕೆ. ಎಸ್. ಚಂದ್ರಶೇಖರ ಐಯ್ಯರ್,
ಜನರಲ್ ಮತ್ತು ರವಿನ್ಯೂ ಇಲಾಖೆಗಳ ಸಕ್ರಿಟರಿ.